ವಾರದ ಪತ್ರ

## ಪುನರಾವರ್ತನೆ ಆಗದಿರಲಿ

ಝೀ ವಾಹಿನಿಯಲ್ಲಿ 'ಸರಿಗಮಪ' 15ರ ಸೀಸನ್ ಆರಂಭವಾಗಿದೆ. ಹಿರಿಯ ಗಾಯಕರು ಈ ಕಾರ್ಯಕ್ರಮದಲ್ಲಿದ್ದು, ಕೊಪ್ಪಳದ ಗಂಗಮ್ಮ ಮೆಗಾ ಆಡಿಶನ್‌ನಲ್ಲಿ ಹಾಡಿ ಆಯ್ಕೆಯಾಗಿದ್ದಾರೆ. ಅವರಿಗೆ ಹಾಡುಗಳನ್ನು ಹಾಡುವ ಬಗ್ಗೆ ಮತ್ತಷ್ಟು ತರಬೇತಿ ದೊರೆತರೆ ತಮ್ಮ ಪ್ರತಿಭೆಯನ್ನು ಹೊರಹೊಮ್ಮಿಸಲು ಅವಕಾಶ ದೊರೆತಂತೆ ಆಗುತ್ತದೆ. ಈ ಕಾರ್ಯಕ್ರಮದಲ್ಲಿ ಕಳೆದ ಸೀಸನ್‌ಗಳಲ್ಲಿ ಹಾಡಿದ ಹಾಡುಗಳನ್ನೇ ಪುನರಾವರ್ತನೆ ಮಾಡದಂತೆ, ಹಳೆಯ, ಹೊಸ ಮಧುರವಾದ ಗೀತೆಗಳನ್ನು ಸ್ಪರ್ಧಿಗಳು ಹಾಡುವತ್ತ ಗಮನಹರಿಸುವಂತೆ ಈ ಕಾರ್ಯಕ್ರಮದ ಜವಾಬ್ದಾರಿ ಹೊತ್ತವರು ನೋಡಿಕೊಳ್ಳಲಿ.

—ವಿಭಾ ಮುರಳೀಧರ್, ತುಮಕೂರು

## ರವಿ ನಟನೆ ಅದ್ಭುತ

'ಮಗಳು ಜಾನಕಿ' ಕಾತುರದಿಂದ ಕಾದು ನೋಡುವ ಧಾರಾವಾಹಿ. ಜಾನಕಿಯ ಮದುವೆ ಆನಂದನ ಜೊತೆಯೋ, ನಿರಂಜನ್ ಜೊತೆಯೋ ಎಂಬ ಕುತೂಹಲ ಮುಗಿದೊಡನೆಯೇ ಈಗ ಚಂದು ಭಾರ್ಗಿ ಪಾತ್ರ, ನಡೆಯ ಬಗ್ಗೆ ಕುತೂಹಲ ಶುರುವಾಗಿದೆ. ಹಾಗೆಯೇ ನಿಷ್ಕಪಟ ನಿರಂಜನ್ ಪಾತ್ರ. ಒಟ್ಟಿನಲ್ಲಿ ಟಿ.ಎನ್. ಸೀತಾರಾಂ ಅವರು ವೀಕ್ಷಕರ ಕುತೂಹಲಕ್ಕೆ ಕೊನೆ ಹಾಡುವುದು ಧಾರಾವಾಹಿ ಮುಗಿದಾಗಲೆ! ಭಾರ್ಗಿ ಪಾತ್ರದ ರವಿ ಅವರ ನಟನೆ ಅದ್ಭುತ. ಅವರ ನಟನೆ ನೋಡಿದರೆ ಎಷ್ಟೋ ಸಲ ಹಳೆಯ ಹಿಂದಿ ಚಿತ್ರಗಳ ಪ್ರಾಣ್ ನೆನಪಿಗೆ ಬರುತ್ತಾರೆ.

—ಹೇಮಂತ ಸಂಪಗಾಂವಕರ, ಬೆಂಗಳೂರು

## ಕನ್ನಡ ವಾಹಿನಿಗಳ ದ್ವಂದ್ವ ನೀತಿ?

ಇತ್ತೀಚೆಗೆ ಒಂದು ಕನ್ನಡ ಸುದ್ದಿ ವಾಹಿನಿಯಲ್ಲಿ ಬೆಂಗಳೂರಿನ ದೇವಸ್ಥಾನ ಒಂದರಲ್ಲಿ ಕನ್ನಡ ಭಾಷೆಯನ್ನು ಬದಿಗೊತ್ತಿ, ನಿರ್ಲಕ್ಷಿಸಿ ಕನ್ನಡೇತರ ಭಾಷೆಯೊಂದಕ್ಕೆ ಮಣೆ ಹಾಕಿದ್ದನ್ನು ತೀವ್ರವಾಗಿ ಅಕ್ಷೇಪಿಸಿದರಲ್ಲದೇ, ಆ ದೇವಸ್ಥಾನವನ್ನು ಮತ್ತು ಆ ದೇವಸ್ಥಾನದ ಆಡಳಿತ ಮಂಡಳಿಯನ್ನು ದಿನಗಟ್ಟಲೇ ತನ್ನ ಕಾರ್ಯಕ್ರಮದಲ್ಲಿ ತರಾಟೆಗೆ ತೆಗೆದುಕೊಂಡಿತು. ವೀಕ್ಷಕರು ಈ ವಾಹಿನಿಯ ಕನ್ನಡಪರ ಧೋರಣೆ ಮತ್ತು ನಿಲುವನ್ನು ಹೃತ್ಪೂರ್ವಕವಾಗಿ ಮೆಚ್ಚಿದರು. ಆದರೆ ಈ ಕನ್ನಡಪರ ವಾಹಿನಿಯು ತನ್ನ ಲೋಗೋದಲ್ಲಿ, ಅಡಿಬರಹದಲ್ಲಿ, ಕಾರ್ಯಕ್ರಮಗಳ ಶೀರ್ಷಿಕೆಯಲ್ಲಿ, ತನ್ನ ಓಬಿ ವ್ಯಾನ್‌ನಲ್ಲಿ ಕನ್ನಡವನ್ನು ನೇಪಥ್ಯಕ್ಕೆ ಸರಿಸಿ ಕೇವಲ ಇಂಗ್ಲಿಷ್ ಭಾಷೆಯನ್ನು ಬಳಸುವುದು ವೀಕ್ಷಕರಿಗೆ ಅರ್ಥವಾಗಲಿಲ್ಲ. ಈ ವಾಹಿನಿಗಳು ಸಂದರ್ಶನ ಮಾಡುವಾಗ, ಪರ ಭಾಷಾ ಚಿತ್ರಗಳ ಪ್ರಮೋಷನ್ ಮಾಡುವಾಗ 'ಕನ್ನಡ ಬದ್ಧತೆ' ಮಾಯವಾಗಿರುತ್ತದೆ. ಕನ್ನಡ ವಾಹಿನಿಗಳ ಕನ್ನಡ ಪ್ರೀತಿ ಓಕೆ, ಆದರೆ ದ್ವಂದ್ವ ನೀತಿ ಯಾಕೆ?

– ರಮಾನಂದ ಶರ್ಮಾ, ನವದೆಹಲಿ

## ಕಣ್ಮನ ತಣಿಸುವ 'ದಶಾವತಾರ'

ಪೌರಾಣಿಕ ಧಾರಾವಾಹಿಗಳ ಸೇರ್ಪಡೆಗೆ ಮತ್ತೊಂದು ಭಕ್ತಿ ಪ್ರಧಾನ ಕಥೆ. ಅದುವೇ ಝೀ ಕನ್ನಡ ಚಾನೆಲ್‌ನಲ್ಲಿ ಪ್ರಾರಂಭವಾಗಿರುವ ಶ್ರೀ ವಿಷ್ಣು ದಶಾವತಾರ. ಪಾತ್ರ ವರ್ಗ ಮತ್ತು ವಸ್ತ್ರಾಭರಣಗಳ ವಿನ್ಯಾಸ ಅಮೋಘವಾಗಿದೆ. ಭಾಷೆಯ ಸ್ಪಷ್ಟತೆ ಇದೆ. ಶ್ರೀ ಸೂಕ್ತ ಶ್ಲೋಕ ಭಕ್ತಿ ಪರವಶವಾಗುವಂತಿದೆ. ಸಾಧಾರಣ ಸಂಸಾರದ ಕಥೆಗಳನ್ನೇ ವೀಕ್ಷಿಸಿ ಬೇಸತ್ತಿದ್ದ ವೀಕ್ಷಕರಿಗೆ ಕಣ್ಮನ ತಣಿಸುವಂತಿದೆ. ಶ್ರುತಿ ನಾಯ್ಡುರವರಿಂದ ಉತ್ತಮ ಪ್ರಯತ್ನ.

– ಮಧುರ ಸುಬ್ರಹ್ಮಣ್ಯ, ಬೆಂಗಳೂರು

## ಜಂಟಿ ಖಾತೆ: ಸರಿಯಾಗೇ ಇದೆ!

ಅನಂತ ಪದ್ಮನಾಭ ಅವರ 'ಮಗಳು ಜಾನಕಿ' ಧಾರಾವಾಹಿಯ ಕುರಿತ ಪತ್ರ(25.01.18)ಕ್ಕೆ ಉತ್ತರ. ಬ್ಯಾಂಕಿನ ವ್ಯವಹಾರಗಳು ಎಲ್ಲಾ ಕಡೆಯೂ ಒಂದೇ. ಕರ್ನಾಟಕದಲ್ಲಿ ಬೇರೆ, ದೆಹಲಿಯಲ್ಲಿ ಬೇರೆ ಅಂತಿಲ್ಲ. ಜಂಟಿ ಖಾತೆಯಲ್ಲಿ '**Operation condition severally**' ಅಂತ ನೋಂದಣಿಯಾದರೆ ಇಬ್ಬರಲ್ಲಿ ಅಥವಾ ಜಂಟಿ ಖಾತೆದಾರರಲ್ಲಿ ಯಾರು ಬೇಕಾದರೂ ಆ ಖಾತೆಯಿಂದ ಹಣ ತೆಗೆಯಬಹುದು.

ಯಾವುದೇ ಧಾರಾವಾಹಿಗೆ ಸಿಗದಂತಹ ಪ್ರಚಾರ ಮತ್ತು ಪ್ರತಿಕ್ರಿಯೆಗಳು ಈ ಧಾರಾವಾಹಿಗೆ ಸಿಗುತ್ತಿರುವುದು ಇದರ ಜನಪ್ರಿಯತೆಗೆ ದ್ಯೋತಕ.

– ಮ. ಕುಮಾರಸ್ವಾಮಿ, ಬೆಂಗಳೂರು

## ಅರ್ಥಪೂರ್ಣ ಸಂಗೀತ ವೇದಿಕೆ

ಝೀ ವಾಹಿನಿಯ ಸ.ರಿ.ಗ.ಮ.ಪ. ಕಾರ್ಯಕ್ರಮವು ವೇದಿಕೆ ಹತ್ತಲು ಸಂಕೋಚಪಡುವ ಉದಯೋನ್ಮುಖ ಕಲಾವಿದರಿಗೆ ಒಂದು ಅರ್ಥಪೂರ್ಣ ಸಂಗೀತ ವೇದಿಕೆ. ಅನೇಕ ಪ್ರತಿಭಾವಂತ ಯುವ ಸಂಗೀತ ಕಲಾವಿದರನ್ನು ಚಿತ್ರರಂಗಕ್ಕೆ ನೀಡಿದೆ, ನೀಡುತ್ತಿದೆ ಎಂದರೆ ತಪ್ಪಾಗಲಾರದು. ಇಲ್ಲಿ ಯಾವುದೇ ರೀತಿಯ ಮತಭೇದವಿಲ್ಲ. ಅಪ್ಪಟ ಪ್ರತಿಭೆಗೆ ಮಾತ್ರ ಅವಕಾಶ. ಪ್ರತಿಭಾವಂತ ನಿರ್ಣಾಯಕರ ಅಡಿಯಲ್ಲಿ ಅವರ ಸೂಕ್ತ ಸಲಹೆಗಳಿಂದ ಯುವ ಪ್ರತಿಭೆಗಳು ಪುಟವಿಟ್ಟ ಚಿನ್ನದಂತೆ ಹೊರಹೊಮ್ಮುತ್ತಿದ್ದಾರೆ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

## ಕಳೆದು ಹೋಗುವ ಕುಟುಂಬ?

ಝೀ ವಾಹಿನಿಯಲ್ಲಿ 'ಬ್ರಹ್ಮ ಗಂಟು' ಧಾರಾವಾಹಿಯಲ್ಲಿ ಕುಟುಂಬ ಸದಸ್ಯರು ಆಗಾಗ ತಿಂಗಳುಗಟ್ಟಲೆ ಕಳೆದು ಹೋಗುತ್ತಾರೆ. ಮನೆಯ ಹಿರಿಯನಾದ ನಾಗಭರಣ ತಿಂಗಳುಗಟ್ಟಲೆ ಕಾಣಿಸಿಕೊಳ್ಳುವುದಿಲ್ಲ. ಇನ್ನು ಅವನ ಅಣ್ಣನ ಹೆಂಡತಿ ಬದುಕಿದ್ದಾಳೊ, ಸತ್ತಿದ್ದಾಳೊ ಅದೂ ತಿಳಿಯುತ್ತಿಲ್ಲ. ಗೀತಾಳ ಅಣ್ಣ ಎನ್ನಿಸಿಕೊಂಡವನು ಬರುವುದು 6 ತಿಂಗಳಿಗೊಮ್ಮೆ. ಮಿಕ್ಕ ಎಲ್ಲಾ ವೇಳೆಯಲ್ಲೂ ಗಯ್ಯಾಳಿ ಹೆಂಡತಿಯರದ್ದೇ ದರ್ಬಾರು. ಅದನ್ನು ಸಹಿಸಿಕೊಳ್ಳುವುದು ವೀಕ್ಷಕನಿಗೆ ಇನ್ನೂ ಕಷ್ಟ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಸುಶ್ರಾವ್ಯ ಹಾಡು

ಕಲರ್ಸ್ ಕನ್ನಡದಲ್ಲಿ ಪ್ರಸಾರವಾದ 'ಕನ್ನಡ ಕೋಗಿಲೆ'ಯಲ್ಲಿ ಶಿವಮೊಗ್ಗದ ಸುರಕ್ಷಾ ದಾಸ್ ಹಾಡಿದ ಮಲಯ ಮಾರುತ ಚಿತ್ರದ 'ಶಾರದೆ ದಯೆ ತೋರದೆ' ಬಹಳ ಸುಶ್ರಾವ್ಯವಾಗಿತ್ತು. ಆ ಆಲಾಪನೆ, ಆ ಸ್ವರ, ಸಂಗೀತ ಎಲ್ಲವೂ ಅವರ ಧ್ವನಿಯಲ್ಲಿ ವಿಶೇಷವಾಗಿ ಮೂಡಿಬಂತು.

ಅಕ್ಟೋಬರ್ 13 ಹಾಗೂ 14ರಂದು ಬಿತ್ತರಗೊಂಡ ಈ ಸಂಚಿಕೆಯು ನವರಾತ್ರಿಯ ಹಿನ್ನೆಲೆಯಲ್ಲಿ ಸಾಂದರ್ಭಿಕ ವೇಷಭೂಷಣ ಹಾಗೂ ಸೊಬಗಿನ ದೃಶ್ಯಕಾವ್ಯಗಳ ಅವಿನಾಭಾವದೊಂದಿಗೆ ಮೂಡಿಬಂದು, ಗಂಧರ್ವ ಲೋಕವನ್ನೇ ಸೃಷ್ಟಿಸಿತ್ತು. ವಿದ್ಯಾಭೂಷಣರ ಮೇರು ಗಾಯನದಿಂದ ಕಾರ್ಯಕ್ರಮ ಮತ್ತಷ್ಟು ಶೋಭಿಸಿತು.

– ಅಂಬಿಕಾ ಮಂಜುನಾಥ್, ಭದ್ರಾವತಿ;